ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೨೬ನೇ ಸೆಪ್ಟೆಂಬರ್ ೧೯೯೧

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೨೫ ಘಂಟೆಗೆ /ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ)ರವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಭಾರೀ ಮತ್ತು ಮಧ್ಯಮ ಕಾಲುವೆಗಳು.

2061 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳೆಯ ಕಾಲುವೆಗಳಾದ ವಿರಿಜಾ, ಆರ್.ಬಿ.ಎಲ್.ಎಲ್. ದೇವರಾಯ, ಬಂಗಾರದೊಡ್ಡಿ, ಚಿಕ್ಕದೇವರಾಯ ಸಾಗರ ನಾಲೆಗಳು ನೆರೆಯ ಹಾವಳಿಯಿಂದ ಹಾನಿಗೊಳಗಾಗಿರುವುದನ್ನು ದುರಸ್ತಿಗೊಳಿಸುವ ಬಗ್ಗೆ ಪ್ರಸ್ತಾವನೆ ಇದೆಯೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಇದೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷರೆ, ಈ ಕಾಲುವೆಗಳು ಎಷ್ಟು ಹಳೆಯದಾಗಿವೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕೃಷ್ಣರಾಜ ಸಾಗರ ನಿರ್ಮಾಣವಾದಾಗ ಈ ಕಾಲುವೆಗಳು ನಿರ್ಮಾಣವಾಗಿವೆ. ಈಗಾಗಲೇ ಮಾನ್ಯ ಸದಸ್ಯರಿಯವರು ಮತ್ತು ನಾನು ಆ ಸ್ಥಳಗಳಿಗೆ ಹೋಗಿ ಬಂದಿದ್ದೇವೆ. ನಾನು ಅಲ್ಲಿಗೆ ಹೋದಾಗ ಹೇಳಿದ್ದಾರೆ. ಮತ್ತೇನಾದರೂ ಪ್ರಶ್ನೆ ಇದ್ದರೆ ಕೇಳಿದರೆ ನಾನು ಅದನ್ನು ಸರಿಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ಕಾಲುವೆಗಳು ನಿರ್ಮಾಣವಾಗಿ 200-300 ವರ್ಷಗಳಾಯಿತು. ಇದು ರಾಜ ಮಹಾರಾಜರುಗಳ ಕಾಲದಲ್ಲಿ ಆಗಿದ್ದು ಈಗ ಏನಾಗಿವೆ ಅಂದರೆ ಅವುಗಳು ರಿಪೇರಿಯಾಗದೆ, ಅವುಗಳಲ್ಲಿರತಕ್ಕ ಸಿಲ್ಟನ್ನು ತೆಗೆಯದೆ ನೀರು ಕಾಲುವೆಗಳಲ್ಲಿ ಮುಂದೆ ಹೋಗುತ್ತಿಲ್ಲ, ಹಾಗಾಗಿ ರೈತರಿಗೆ ಬಹಳ ಹಾನಿಯಾಗಿದೆ. ಆದ್ದರಿಂದ ನೀವು ಈ ರಿಪೇರಿ ಕೆಲಸವನ್ನು ಯಾವಾಗ ಶುರು ಮಾಡುತ್ತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಅವರ ಜೊತೆ ಹೋದಾಗ ನನ್ನ ತಿಳುವಳಿಕೆ ಪ್ರಕಾರ ಅವರು ಹೇಳಿದ ವಿಚಾರ ಇರಬಹುದು ಅಂತ ನಾನು

ಹೇಳಿದೆ. ದಯವಿಟ್ಟು ಕ್ಷಮಿಸಬೇಕು. ಇದು ಸುಮಾರು ಮುನ್ನೂರು ವರ್ಷ ಹಳೆಯ ಕಾಲುವೆ. ಇದರ ಬಗ್ಗೆ ಏನು ಕೆಲಸ ಮಾಡಬೇಕಾಗಿದೆ ಮತ್ತು ಆ ಕೆಲಸದಲ್ಲಿ National Water Management Project ಅನ್ವಯ ವರ್ಲ್ಡ್ ಬ್ಯಾಂಕ್‌ಗೆ ಈ ಪ್ರಪೋಸಲ್ಸ್‌ನ್ನು ಕಳಿಸುತ್ತಿದ್ದೇವೆ. ಯೋಗ್ಯ ಸಮಯದಲ್ಲಿ ಪೂರ್ತಿ ಕೆಲಸ ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ಕೆಲಸಗಳಿಗೆ ಎಲ್.ಒ.ಸಿ. ಕೊಡುವಲ್ಲಿ ಸಹಿತ ತುಂಬಾ ತಾರತಮ್ಯ ಆಗುತ್ತಿದೆ. ತಾವು ಅದನ್ನು ಸರಿಪಡಿಸುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅದನ್ನು ನಾನು ನೋಡುತ್ತೇನೆ.

ಪ್ರಶ್ನೆ ಸಂಖ್ಯೆ : 2066 - ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮ ಅವರು ಹಾಜರಿರಲಿಲ್ಲ.

ತುಂಗಭದ್ರಾ ಎಡದಂತೆ ನಾಲೆಯ ದುರಸ್ತಿ

2071 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ 1983 ರಿಂದ 1991 ರವರೆಗೆ ಮಂಜೂರಾದ ಹಣವೆಷ್ಟು?

ಆ) ಎಷ್ಟು ಚೈನ್ ಕಾಮಗಾರಿಯನ್ನು 1983 ರಿಂದ 1991 ರವರೆಗೆ ಪೂರೈಸಲಾಗಿದೆ?

ಇ) ಇದಕ್ಕೆ ತಗಲಿದ ಹಣ ಎಷ್ಟು ಹಾಗೂ ಉಳಿದಿರುವ ಹಣವೆಷ್ಟು?

ಈ) ದುರಸ್ತಿ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ 1983 ರಿಂದ 1991 ರವರೆಗೆ ರೂ. 2,959.41 ಲಕ್ಷಗಳು ಮಂಜೂರಾಗಿರುತ್ತದೆ. ಒಳಮೈ ಭದ್ರಪಡಿಸುವ ಕೆಲಸಕ್ಕೆ ರೂ.1,986 ಲಕ್ಷ ಮಂಜೂರಾಗಿದೆ.

ಆ) ಅಗತ್ಯವಿದ್ದೆಡೆ ದುರಸ್ತಿ ಕೆಲಸಗಳನ್ನು ನಿರ್ವಹಿಸಲಾಗಿದೆ ಮತ್ತು ಒಳಮೈ ಭದ್ರಪಡಿಸುವ ಕೆಲಸವನ್ನು 2288 ಚೈನುಗಳಲ್ಲಿ ಪೂರೈಸಲಾಗಿದೆ.

ಇ) ದುರಸ್ತಿಗೆ ತಗಲಿರುವ ಹಣ 2,959.41 ಲಕ್ಷ ರೂ.ಗಳು ಮತ್ತು ಒಳಮೈ ಭದ್ರಪಡಿಸುವಿಕೆಗೆ ರೂ.1,986 ಲಕ್ಷ ರೂ.ಗಳು. ಹಣ ಉಳಿದಿಲ್ಲ.

ಈ) ಕ್ಲೋಸರ್ ಸಮಯದಲ್ಲಿ ಕೈಗೊಂಡಿದ್ದ ದುರಸ್ತಿ ಕಾರ್ಯವು ಮುಗಿದಿದೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಎಡದಂಡೆ ನಾಲೆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಅದು ಸುಮಾರು 25-30 ವರ್ಷಗಳಷ್ಟು ಹಿಂದೆ ಮಾಡಿರತಕ್ಕಂಥ ನಾಲೆ. ಅದರ ಒಳಮೈ ದುರಸ್ತಿಗೆ ಸರ್ಕಾರ ಈಗಾಗಲೇ, 29 ಕೋಟಿ ರೂಪಾಯಿ ಅಂದಾಜು ಖರ್ಚು ಮಾಡಿದ್ದಾರೆ. ಆದರೆ ಎಕ್ಸ್‌ಪರ್ಟ್ಸ್ ಕಮಿಟಿಯವರು 1989ರಲ್ಲಿ ಏನು ಆ ನಾಲೆಯ ದುರಸ್ತಿ ಕೆಲಸ ತೆಗೆದುಕೊಳ್ಳಬೇಕು ಎಂದು ನಿರ್ಣಯ ತೆಗೆದುಕೊಂಡ ಮೇಲೆ ಅದರಲ್ಲಿ ಕೆಲವು ಭಾಗಗಳನ್ನು ಬಿಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 150 ಚೈನ್ ಅಂದಾಜಿನ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಸರ್ಕಾರಕ್ಕೆ ಈ ಕೆಲಸ ತೆಗೆದುಕೊಳ್ಳುವ ಉದ್ದೇಶ ಇದೆಯೆ?